

ಟ್ರೋಲಿಗರಿಂದ ಹಣ್ಣಾದ ಬ್ರಿಟನ್‌ನ ಗಾಯಕಿ ಅಡೆಲ್



ಹೇಗೆ ಪರಿಭಾವಿಸಬೇಕು ಎನ್ನುವ ಅಂಶಗಳೂ ಅಡಕವಾಗಿರುವುದು ಗಮನಾರ್ಹ.

ಮಹಿಳಾ ಕ್ರಿಕೆಟ್‌ನಲ್ಲಿ ದಾಖಲೆಗಳ ಮೂಲಕ ಛಾಪು ಮೂಡಿಸಿದ ಮಿಥಾಲಿ ರಾಜ್ ಅವರ ಕೃಷ್ಣವರ್ಣ, ಅವರ ಕಂಕುಳಲ್ಲಿ ಕೂದಲು ಕಂಡಿದ್ದು – ಇಂಥವಕ್ಕೆಲ್ಲ ಜನರು ಟ್ರೋಲ್ ಮಾಡಿದ್ದರು. ಈ ರೀತಿ ಆದಾಗ ಮನಸ್ಸಿನ ಮೇಲೆ ಅನಗತ್ಯ ಒತ್ತಡ ಮೂಡುತ್ತದೆ ಎಂದು ಮಿಥಾಲಿ ಹೇಳಿಕೊಂಡಿದ್ದರು. ಟ್ರೋಲ್‌ಗಳನ್ನು ನಿರ್ಲಕ್ಷಿಸುವುದು ಕಷ್ಟ. ಆಟದ ರಸಾಸ್ವಾದ ಮಾಡುವ ಬದಲು ಇಂತಹ ಚಿಲ್ಲರೆ ವಿಷಯಗಳನ್ನು ಟೀಕೆಗೆ ವಸ್ತು ಮಾಡಿಕೊಳ್ಳುವ ಕೆಟ್ಟ ಮನಸ್ಸಿನ ಜನರ ಕುರಿತು ಅವರು ಬೇಸರವನ್ನೂ ಹೊರಹಾಕಿದ್ದರು. ‘ಮಹಿಳೆಯರು ಆಡುವುದೇ ಕಷ್ಟ ಎನ್ನುವಂತಹ ದೇಶದಲ್ಲಿ ಇವೆಲ್ಲವೂ ಬೇಕೆ’ ಎಂಬ ಪ್ರಶ್ನೆ ಕೇವಲ ಮಿಥಾಲಿ ಅವರದ್ದಷ್ಟೇ ಅಲ್ಲ.

ದೀಪಿಕಾ ಪಡುಕೋಣೆ ಹಿಂದಿ ಚಿತ್ರರಂಗದ ನಂಬರ್ ಒನ್ ನಟಿಯಾದಾಗ ಒಂದು ಸುದೀರ್ಘ ಸಂದರ್ಶನ ನೀಡಿದ್ದರು. ಅದರಲ್ಲಿ ತಮ್ಮ ವೃತ್ತಿ ಬದುಕಿನ ಮೊದಲ ಅವಧಿಯ ಅನುಭವಗಳನ್ನು ಹಂಚಿಕೊಳ್ಳುವಾಗ, ಪ್ರಕಟವಾಗುತ್ತಿದ್ದ ವಿಮರ್ಶೆಗಳನ್ನು ಗಂಭೀರವಾಗಿ ಪರಿಗಣಿಸಿದ್ದ ಪ್ರಸಂಗವನ್ನು ನೆನಪಿಸಿಕೊಂಡಿದ್ದರು. ತಮ್ಮ ಪಾತ್ರದ ಕುರಿತು ಬರುತ್ತಿದ್ದ ಸಣ್ಣಪುಟ್ಟ ಟೀಕೆಗಳನ್ನೂ ಅವರು ಗಂಭೀರವಾಗಿ ತೆಗೆದುಕೊಂಡು, ಕೆಲವೊಮ್ಮೆ ರಾತ್ರಿ ನಿದ್ದೆಯೇ ಬಾರದಿದ್ದ ದಿನಗಳೂ ಇದ್ದವು. ಇದನ್ನು ಗಮನಿಸಿದ ಅವರ ತಾಯಿ, ವಿಮರ್ಶೆ ಪ್ರಕಟವಾದ ಪತ್ರಿಕೆಗಳು, ನಿಯತಕಾಲಿಕಗಳನ್ನೆಲ್ಲ ದೀಪಿಕಾ ಕೈಗೆ ಸಿಗದಂತೆ ತೆಗೆದಿಡುವ ಉಪಾಯ ಮಾಡಿದ್ದರು. ಇದರಿಂದ ಕ್ರಮೇಣ ತಾವು ಕೆಲಸದ ಮೇಲೆ ಗಮನ



ಕಂಗನಾ: ಟ್ರೋಲ್ ಮಾಡುವುದರಲ್ಲಿ ಗಟ್ಟಿಗಿತ್ತಿ